

‘ಪ್ಯಾಟೆ ಹುಡ್ಗೀರ ಹಳ್ಳಿ ಲೈಫ್’ನಲ್ಲಿ ಅಕುಲ್ ಬಾಲಾಜಿ

## ಜನಪ್ರಿಯತೆಯ ಆಯುಷ್ಯ ಕಡಿಮೆ!

ಕಿರುತೆರೆಯ ಧಾರಾವಾಹಿಗಳು ಅಪಾರ ಜನಪ್ರಿಯತೆ ಗಳಿಸಿದರೂ, ಅವುಗಳ ಕಲಾವಿದರು ಸಿನಿಮಾಕ್ಕಾಗಿ ಹಂಬಲಿಸುವುದು ಏಕೆ? ಧಾರಾವಾಹಿಗಳಲ್ಲಿ ನಟಿಸುವ ಕಲಾವಿದರ ಜನಪ್ರಿಯತೆಯ ಆಯುಸ್ಸು ಕಡಿಮೆ ಇರುವುದು ಇದಕ್ಕೆ ಕಾರಣವಾಗಿರಬಹುದು.

ಧಾರಾವಾಹಿಯೊಂದು ಪ್ರಸಾರವಾಗುತ್ತಿರುವ ಸಂದರ್ಭದಲ್ಲಿ ಅದರ ಕಲಾವಿದರು ಕೂಡ ಜನಪ್ರಿಯತೆ ಗಳಿಸುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಪಾತ್ರದ ಹೆಸರಿನಿಂದಲೇ ಕಲಾವಿದರನ್ನು ಗುರ್ತಿಸಲಾಗುತ್ತದೆ. ಆದರೆ, ಆ ಧಾರಾವಾಹಿಯ ಜೊತೆಗೆ ಕಲಾವಿದರು ಕೂಡ ಪ್ರೇಕ್ಷಕರ ನೆನಪುಗಳಿಂದ ಮಾಸತೊಡಗುತ್ತಾರೆ.

ಧಾರಾವಾಹಿಗಳ ಕಲಾವಿದರಿಗೆ ಇರುವ ಹಲವು ಮಿತಿಗಳು ಕೂಡ ಇದಕ್ಕೆ ಕಾರಣವಾಗಿರುತ್ತವೆ. ಒಂದು ಧಾರಾವಾಹಿಯಲ್ಲಿ ನಟಿಸುವ ಮುಖ್ಯ ಪಾತ್ರಧಾರಿಗಳು ಮತ್ತೊಂದು ಧಾರಾವಾಹಿಯಲ್ಲಿ ನಟಿಸುವುದನ್ನು ನಿರ್ಬಂಧಿಸಲಾಗುತ್ತದೆ. ಆ ಧಾರಾವಾಹಿ ಮುಗಿದ ನಂತರ ಬೇರೆ ಧಾರಾವಾಹಿಗಳಲ್ಲಿ ಅವರಿಗೆ ಮುಖ್ಯಪಾತ್ರ ದೊರೆಯುವುದು ಅಪರೂಪ. ಏಕೆಂದರೆ, ವಾಹಿನಿಗಳು ಪ್ರತಿ ಧಾರಾವಾಹಿಗೂ ಹೊಸ ಮುಖಗಳನ್ನೇ ಬಯಸುತ್ತವೆ. ಈ ಅನನುಕೂಲ ಸಿನಿಮಾಗಳಲ್ಲಿಲ್ಲ. ಒಂದು ಸಿನಿಮಾ ಗೆದ್ದರೆ ಆ ಚಿತ್ರದ ಕಲಾವಿದರಿಗೆ ಮತ್ತಷ್ಟು ಅವಕಾಶಗಳು ದೊರೆಯುತ್ತವೆ. ಈ ಸೂತ್ರ ಟೀವಿಯಲ್ಲಿ ಚಾಲ್ತಿಯಲ್ಲಿಲ್ಲ.

ತಾರಾವರ್ಚಸ್ಸು ಕುಂಠಿತವಾಗುವುದಿಲ್ಲವೇ?

ಈ ಪ್ರಶ್ನೆಗಳಿಗೆ ಉತ್ತರವನ್ನು ‘ಬಿಗ್ ಬಾಸ್’ ರಿಯಾಲಿಟಿ ಶೋ ಮೂಲಕವೇ ಕಂಡುಕೊಳ್ಳಬಹುದೆನ್ನಿಸುತ್ತದೆ. ಕನ್ನಡ ಕಿರುತೆರೆ ಇತಿಹಾಸದಲ್ಲಿ ‘ಬಿಗ್ ಬಾಸ್’ ಬಹುದೊಡ್ಡ ಬಜೆಟ್‌ನ ಕಾರ್ಯಕ್ರಮ. ಈ ಶೋ ಬಜೆಟ್ ಸುಮಾರು 60 ಕೋಟಿ ರೂಪಾಯಿ ಎಂದುಕೊಳ್ಳುವುದಾದರೆ, ಅದರಲ್ಲಿ ಅಗ್ರಪಾಲು ಸುದೀಪ್ ಸಂಭಾವನೆಗೆ ಸಲ್ಲುತ್ತದೆ ಎನ್ನುವ ಮಾತಿದೆ. ರಿಯಾಲಿಟಿ ಶೋಗಳಲ್ಲಿ ನಟರು ಪಡೆಯುವ ಸಂಭಾವನೆಯನ್ನು ಯಾರೂ ಬಹಿರಂಗವಾಗಿ ಚರ್ಚಿಸುವುದಿಲ್ಲ.

ಒಂದು ಅಂದಾಜಿನ ಪ್ರಕಾರ, ‘ಬಿಗ್‌ಬಾಸ್’ ನಿರೂಪಣೆಗಾಗಿ ಸುದೀಪ್ ಅವರಿಗೆ 5ರಿಂದ 6 ಕೋಟಿ ರೂಪಾಯಿ ಸಂಭಾವನೆ ಸಲ್ಲುತ್ತದೆ. ಇದಕ್ಕಾಗಿ ಅವರು ಶೂಟಿಂಗ್‌ನಲ್ಲಿ ಭಾಗವಹಿಸಬೇಕಾದ ದಿನಗಳ ಸಂಖ್ಯೆ ಸುಮಾರು 20. ಆದರೆ, 60ರಿಂದ 100 ದಿನಗಳ ಕಾಲ ಚಿತ್ರೀಕರಣ ನಡೆಯುವ ಸಿನಿಮಾವೊಂದಕ್ಕೆ ಅವರಿಗೆ ದೊರೆಯುವುದು ಕೂಡ ಹೆಚ್ಚೂಕಡಿಮೆ ಇಷ್ಟೇ ಸಂಭಾವನೆ. ಅಂದರೆ, ಕಿರುತೆರೆಯಲ್ಲಿ ಕಡಿಮೆ ಸಮಯದಲ್ಲಿ ಹೆಚ್ಚು ಗಳಿಕೆ ಸಾಧ್ಯವಾಗುತ್ತದೆ ಎಂದಾಯಿತು.

ಕಿರುತೆರೆಯ ರಿಯಾಲಿಟಿ ಶೋಗಳಲ್ಲಿ ಭಾಗವಹಿಸುವುದರಿಂದ ನಾಯಕ ನಟರಿಗೆ ಗಳಿಕೆಯ ಜೊತೆಗೆ ಮತ್ತೊಂದು ಲಾಭವೂ ಇದೆ. ಅದು ತಮ್ಮ ಸಿನಿಮಾಗಳ ಪ್ರಚಾರಕ್ಕಾಗಿ ಶೋಗಳನ್ನು ವೇದಿಕೆಯನ್ನಾಗಿ ಬಳಸಿಕೊಳ್ಳುವುದು. ಸುದೀಪ್, ಪುನೀತ್, ಗಣೇಶ್ – ಎಲ್ಲ ನಟರ ಶೋಗಳಲ್ಲೂ ಬೇರೆಬೇರೆ ಚಿತ್ರತಂಡಗಳು ಭಾಗವಹಿಸಿರುವುದನ್ನು, ಸಿನಿಮಾಗಳ ಟೀಸರ್‌ಗಳು ಅಥವಾ ಗೀತೆಗಳ ಧ್ವನಿಮುದ್ರಿಕೆಗಳು ಬಿಡುಗಡೆಯಾಗಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಹೀಗೆ, ಕಿರುತೆರೆಯಲ್ಲಿ ಕಾಣಿಸಿಕೊಳ್ಳುವುದು ಬೆಳ್ಳಿತೆರೆಯ ವರ್ಚಸ್ಸಿಗೂ ಪೂರಕವಾಗಿರುವುದರಿಂದಲೇ ನಾಯಕನಟರು ರಿಯಾಲಿಟಿ ಶೋಗಳತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ.

ಕಲಾವಿದರು ಮಾತ್ರವಲ್ಲ, ತಂತ್ರಜ್ಞರು ಕೂಡ ರಿಯಾಲಿಟಿ ಶೋಗಳ ಮೂಲಕ ಜನಪ್ರಿಯತೆ ಗಳಿಸಿರುವ ಉದಾಹರಣೆಗಳಿವೆ. ಮಯೂರಿ ಉಪಾಧ್ಯ ಅಂತರರಾಷ್ಟ್ರೀಯ ಮಟ್ಟದ ನೃತ್ಯ ಕಾರ್ಯಕ್ರಮಗಳನ್ನು ಸಂಯೋಜಿಸಿದ್ದರೂ ಅವರು ಕನ್ನಡದ ಜನತೆಗೆ